

# ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು!



■ ವಿ. ವಿಜಯೇಂದ್ರ ರಾವ್

ಹಿಂದೆಯೆಲ್ಲಾ ಶಾಲೆಯಲ್ಲಿ ಸರಿಯಾಗಿ ಓದದಿದ್ದರೆ, ಮೇಷ್ಟ್ರು ಆ ವಿದ್ಯಾರ್ಥಿಗೆ 'ನಿನಗೆಲ್ಲಾ ವಿದ್ಯೆ ಗಿದ್ಯೆ ತಲೆಗೆ ಹತ್ತೋಲ್ಲ, ಎಲ್ಲಾದರೂ ಹೋಗಿ ಹಸು, ಎಮ್ಮೆ ಮೇಯಿಸಿಕೊಂಡಿರು, ನೀನು ಅದಕ್ಕೆ ಮಾತ್ರ ಲಾಯಕ್ಕು' ಅಂತ ಬೈಯುತ್ತಿದ್ದರು.

ಹಾಗೆಯೇ... ಒಂದು ಶಾಲೆಯಲ್ಲಿ ಒಬ್ಬ ಮೇಷ್ಟ್ರು ವಿದ್ಯಾರ್ಥಿಗೆ 'ನಿನಗೆಲ್ಲಾ ಸರಿಯಾಗಿ ಓದೆಲ್ಲಾ ಹತ್ತಲ್ಲಾ, ನೀನು ಎಮ್ಮೆ ಗಿಮ್ಮೆ ಮೇಯಿಸಿಕೊಂಡಿರು' ಎಂದಾಗ, ದುರದೃಷ್ಟವಶಾತ್ ಆ ವಿದ್ಯಾರ್ಥಿಯು ನಿಜವಾಗಿಯೂ ಎಮ್ಮೆ, ಹಸು ಮೇಯಿಸಿಕೊಂಡೇ ಇದ್ದವನು. ಓದಿನಲ್ಲಿ ಮಾತ್ರ ಸ್ವಲ್ಪ ಅಷ್ಟಕ್ಕಷ್ಟೇ ಆಗಿದ್ದ.

ಅವನು ಆ ಮೇಷ್ಟ್ರಿಗೆ 'ಏನ್ಸಾರ್ ಹಸು, ಎಮ್ಮೆ ಮೇಯಿಸೋದು ಅಂದ್ರೆ ಅಷ್ಟು ಸುಲಭ ಅಂತ ಅಂದ್ಕೊಂಡಿದ್ದೀರಾ' ಎಂದು ಕೇಳಿದಾಗ, ಮೇಷ್ಟ್ರು 'ಇಲ್ಲವೇ ಮತ್ತೆ, ಓದು, ಗೀದು ಬರದೆ ಇರುವವನು ತಾನೇ ಅವುಗಳನ್ನು ಮೇಯಿಸುತ್ತಾನೆ' ಅಂದಾಗ...

ಆ ಹುಡುಗ 'ಐವತ್ತು ಹಸುಗಳಲ್ಲಿ, ಅವುಗಳು ಗುಂಪಿನಲ್ಲಿ ಒಟ್ಟಿಗೆ ಇರದೆ, ಅಲ್ಲಲ್ಲಿ ಇದ್ದಾಗ, ಇತ್ತೀಚೆಗೆ ತಾನೇ ಕರು ಹಾಕಿದ ಗೌಡರ ಮನೆ ಹಸು ಯಾವುದು? ಶೆಟ್ಟರ ಮನೆ ಹಸುಗಳು ಯಾವುವು? ಹಸನ್ ಸಾಬರ ಹಸುಗಳು ಯಾವುವು? ಇವನ್ನೆಲ್ಲಾ ಕಂಡುಹಿಡಿಯುವುದಕ್ಕೆ ನಿಮಗೆ ಆಗುತ್ತಾ?' ಎಂದು ಕೇಳಿದಾಗ, ಆ ಮೇಷ್ಟ್ರು ಬೆವರು ಒರೆಸಿಕೊಳ್ಳುತ್ತಾ, 'ಎಲ್ಲಾ ಹಸುಗಳು ಒಂದೇ ಕಡೆ ಮೇಯುವುದಿಲ್ವಾ?' ಎಂದು ಕೇಳಿದರು. ಅವನು 'ಅದು ಏನು ನಾವು ಹೇಳಿದ್ದಂಗೆ ಕೇಳುತ್ತಾ, ಅವು ಅವಕ್ಕೆ ಇಷ್ಟ ಬಂದ ಕಡೆ, ಹೆಚ್ಚು ಹುಲ್ಲಿರುವ ಕಡೆ ಮೇಯಿಕೊಳ್ಳುತ್ತವೆ' ಎಂದಾಗ, ಮೇಷ್ಟ್ರು ತಲೆಯಾಡಿಸಿದರು.

ಅವನು 'ಸಾರ್, ನಿಮಗೆ ಅವುಗಳು ಯಾವಾಗ ಸಗಣಿ ಹಾಕುತ್ತೆ ಅಂತ ಗೊತ್ತಾ? ಬಿದ್ದ ಸಗಣಿಯನ್ನು ತಕ್ಷಣವೇ ಒಟ್ಟಾಗಿ ಎತ್ತಿಕೊಳ್ಳುತ್ತೀರಾ? ನಿಮಗೆ ಬೆರಣಿಯನ್ನು ತಟ್ಟುವುದಕ್ಕೆ ಗೊತ್ತಾ? ಯಾವ ಹದಕ್ಕೆ ಅದು ಒಣಗಿದರೆ ಕಾಂಕ್ರೀಟಿನಂತೆ ಗಟ್ಟಿಯಾಗಿ ಇರುತ್ತೆ? ಇದೆಲ್ಲಾ ನಿಮಗೆ ಗೊತ್ತಾ' ಎಂದು ಪ್ರಶ್ನೆಗಳ ಸರಮಾಲೆಯನ್ನೇ ಸಿಡಿಸಿದಾಗ, ಮೇಷ್ಟ್ರು ಬೆವರಿ ಅಸಹಾಯಕತೆಯಿಂದ ಅವನತ್ತ ವಿಷಣ್ಣ ನೋಟ ಬೀರಿದರು.

''ಸಾರ್... ನಿಮಗೆ ಗೊತ್ತಾ, 'ನಿನಗೆ ಸರಿಯಾಗಿ ಹಸು, ಎಮ್ಮೆ ಮೇಯಿಸಲು ಬರಲ್ಲ, ಅದಕ್ಕೆ ಶಾಲೆಗೆ ಹೋಗಿ, ಓದಿ ನಂತರ ಮೇಷ್ಟ್ರು ಆಗು, ನೀನು ಅದಕ್ಕೆ ಲಾಯಕ್ಕು' ಅಂತ ನಮ್ಮಪ್ಪ ಬೈಯ್ದು ಕಳಿಸಿದರು'' ಎಂದಾಗ ಮೇಷ್ಟ್ರು, ನಾನೇನೋ ಸಹಜವಾಗಿಯೇ ಹೇಳಿದೆ, ಆದರೆ ಅದು ಹೀಗೆ ನನಗೆ ಉಲ್ಟಾ ಹೊಡೆಯುತ್ತೆ ಅಂತ ನಮ್ಮಪ್ಪನಾಣೆಗೂ ಗೊತ್ತಿರಲಿಲ್ಲ ಅಂದ್ಕೊಂಡರು.

ಮುಂದೆ... ಅವರು ಇಡೀ ಸರ್ವೀಸಿನಲ್ಲೇ ಯಾರಿಗೂ ಆ ರೀತಿ ಹೇಳಲೇ ಇಲ್ಲ...! ■

